## ನಿಮ್ಮೊಡನೆ

# ಅಂತರಂಗದ ಚೆಲುವು, ವ್ಯಕ್ತಿತ್ವದ ಗೆಲುವು

> ಆರೋಗ್ಯದ ಬಗೆಗಿನ ಯುವಜನರ ಕಾಳಜಿ ಸ್ವಾಗತಾರ್ಹ. ಆದರೆ, ದೇಹವನ್ನು ಹುರಿಗಟ್ಟಿಸುವ ಕ್ರಿಯೆಯಲ್ಲಿ ಹೊರಗನ್ನು ಸುಂದರವಾಗಿಸಿಕೊಂಡು, ಒಳಗನ್ನು ಗಾಸಿಗೊಳಿಸುವುದರಲ್ಲಿ ಯಾವ ಅರ್ಥವೂ ಇಲ್ಲ. ಮೇಲ್ನೋಟದ ಗಟ್ಟಿತನಕ್ಕಿಂತಲೂ ಒಳಗಿನ ಗಟ್ಟಿತನ ಹೆಚ್ಚು ಮುಖ್ಯವಾದುದು.

ಯುವಜನರಿಗೆ ಯಾವುದು ಮಾದರಿ? ಯಾವುದು ಮಾದರಿಯಲ್ಲ? – ಈ ಪ್ರಶ್ನೆಗಳಿಗೆ ಉತ್ತರರೂಪದಲ್ಲಿ ದೇಶದ ಪ್ರಖ್ಯಾತ ಸಿನಿಮಾ ಕುಟುಂಬಗಳಿಗೆ ಸಂಬಂಧಿಸಿದ ಯುವಜನರು ಇತ್ತೀಚೆಗೆ ಸುದ್ದಿಯಾದುದನ್ನು ಗಮನಿಸಬಹುದು. ಕನ್ನಡವೂ ಸೇರಿದಂತೆ ವಿವಿಧ ಭಾಷೆಗಳಲ್ಲಿನ ನಟ–ನಟಿಯರು ಡ್ರಗ್ಸ್ ಜಾಲದಲ್ಲಿ ಭಾಗಿಯಾಗಿರುವ ಕುರಿತು ತನಿಖೆಗಳು ನಡೆಯುತ್ತಿವೆ. ಇದು ನಮ್ಮ ಯುವಜನರು ನಡೆಯಬಾರದ ದಾರಿ. ವೈಯಕ್ತಿಕ ಬದುಕನ್ನು ಹಾದಿರಂಪ ಬೀದಿರಂಪ ಮಾಡುವುದು ಹಾಗೂ ಸೆಲೆಬ್ರಿಟಿ ಎನ್ನುವ ಗತ್ತನ್ನು ತಲೆಗೇರಿಸಿಕೊಂಡು ಸಮಾಜದ ಕಟು ವಾಸ್ತವಗಳಿಗೆ ಜಡವಾಗುವುದು ಕೂಡ ಯಾರಿಗೂ ಅನುಕರಣೀಯವಲ್ಲ. ಯುವಜನರು ಅನುಸರಿಸಬೇಕಾದ ಹಾದಿ ಯಾವುದೆನ್ನುವುದನ್ನು ಕನ್ನಡ ಸಿನಿಮಾರಂಗದ ಜನಪ್ರಿಯ ನಟ ಪುನೀತ್ ರಾಜ್‌ಕುಮಾರ್ ಅವರ ಸಾವಿಗೆ ವ್ಯಕ್ತವಾದ ಪ್ರತಿಕ್ರಿಯೆ ಸೂಚಿಸುತ್ತಿದೆ. ಪ್ರಖ್ಯಾತ ಸಿನಿಮಾ ಕಲಾವಿದನ ಸಾವು ಸಮಾಜದ ಮೇಲೆ ದೊಡ್ಡ ಪ್ರಮಾಣದ ಪರಿಣಾಮ ಬೀರುವುದು ಸಹಜ. ಆದರೆ, ಪುನೀತ್ ಸಾವಿನ ಪರಿಣಾಮ ಬೇರೆಯದೇ ರೀತಿಯದ್ದು. ಕುಟುಂಬದ ಸದಸ್ಯನನ್ನು ಕಳೆದುಕೊಂಡಂತೆ ನಾಡಿನ ಲಕ್ಷಾಂತರ ಮಂದಿ ಮರುಗಿರುವುದು ಪುನೀತ್‌ರ ವ್ಯಕ್ತಿತ್ವದ ಘನತೆಯನ್ನು ಸೂಚಿಸುವಂತಿದೆ. ಸಿನಿಮಾಗಳ ಮೂಲಕ ಯುವಜನರನ್ನು ಸೆಳೆದಂತೆ, ತಮ್ಮ ವ್ಯಕ್ತಿತ್ವ ಹಾಗೂ ಸಾಮಾಜಿಕ ಚಟುವಟಿಕೆಗಳ ಮೂಲಕ ಪುನೀತ್ ಸಮಾಜದ ಮನಸ್ಸು ಗೆದ್ದಿದ್ದಾರೆ. ಸಮಾಜದ ಪ್ರೀತಿಯನ್ನು ಪಡೆದ ಸಾಧಕರಿಗೆ ಇರಬೇಕಾದ ಸಾಮಾಜಿಕ ಹೊಣೆಗಾರಿಕೆಯ ಪ್ರತೀಕದಂತೆ ಪುನೀತ್ ಕಾಣಿಸುತ್ತಿದ್ದಾರೆ. ಹೀಗೆ ಸಮಾಜದ ಅಂತಃಕರಣವನ್ನು ಮೀಟುವ ವ್ಯಕ್ತಿತ್ವಗಳು ಯಾವ ಕಾಲದಲ್ಲೂ ವಿರಳ.

ಪುನೀತ್‌ರ ಸಾವಿನೊಂದಿಗೆ ಯುವಜನರು ತಮ್ಮ ಆರೋಗ್ಯದ ಬಗ್ಗೆ ಹೆಚ್ಚು ಕಾಳಜಿ ವಹಿಸುತ್ತಿರುವ ಘಟನೆಗಳು ನಾಡಿನ ವಿವಿಧ ಭಾಗಗಳಿಂದ ವರದಿಯಾಗಿವೆ. ಜಿಮ್‌ಗಳಲ್ಲಿ ಯುವಕರ ಸಂಖ್ಯೆ ಕಡಿಮೆಯಾಗಿದ್ದರೆ, ಆಸ್ಪತ್ರೆಗಳಲ್ಲಿ ಆರೋಗ್ಯ ತಪಾಸಣೆಗಾಗಿ ಸಾಲುಗಟ್ಟಿದವರೂ ಇದ್ದಾರೆ. ಹೃದಯದ ಆರೋಗ್ಯದ ಬಗ್ಗೆ ಮಾಧ್ಯಮಗಳಲ್ಲಿ ಚರ್ಚೆಗಳಾಗುತ್ತಿವೆ. ಫಿಟ್‌ನೆಸ್‌ನಲ್ಲಿ ಅಪಾರ ಆಸಕ್ತಿ ಹಾಗೂ ಪರಿಶ್ರಮ ಹೊಂದಿದ್ದ ಪುನೀತ್ ಇದ್ದಕ್ಕಿದ್ದಂತೆ ಸಾವಿಗೀಡಾದುದು, ಮೇಲ್ನೋಟಕ್ಕೆ ಕಾಣಿಸುವ ದೇಹದಾರ್ಢ್ಯದ ತಾಕತ್ತಿನ ನೈಜತೆಯ ಬಗ್ಗೆ ಅನುಮಾನಗಳು ಉಂಟಾಗಲು ಕಾರಣವಾಗಿದೆ.

ಆರೋಗ್ಯದ ಬಗೆಗಿನ ಯುವಜನರ ಕಾಳಜಿ ಸ್ವಾಗತಾರ್ಹ. ದೇಹವನ್ನು ದಂಡಿಸುವುದು ಅನಿವಾರ್ಯ ಮತ್ತು ದೇಹದ ಆರೋಗ್ಯಕ್ಕದು ಅಗತ್ಯ. ಆದರೆ, ನಮ್ಮ ದೇಹದಂಡನೆಯ ಕ್ರಮಗಳು ವೈಜ್ಞಾನಿಕ ನೆಲೆಗಟ್ಟಿನಲ್ಲಿರಬೇಕು. ದೇಹವನ್ನು ಹುರಿಗಟ್ಟಿಸುವ ಕ್ರಿಯೆಯಲ್ಲಿ ಹೊರಗನ್ನು ಸುಂದರವಾಗಿಸಿಕೊಂಡು, ಒಳಗನ್ನು ಗಾಸಿಗೊಳಿಸುವುದರಲ್ಲಿ ಯಾವ ಅರ್ಥವೂ ಇಲ್ಲ. ಮೇಲ್ನೋಟದ ಗಟ್ಟಿತನಕ್ಕಿಂತಲೂ ಒಳಗಿನ ಗಟ್ಟಿತನ ಹೆಚ್ಚು ಮುಖ್ಯವಾದುದು ಹಾಗೂ ಅದಕ್ಕೆ ನಾವು ಹೆಚ್ಚಿನ ಒತ್ತು ನೀಡುವುದು ಅಗತ್ಯ. ಭಾರತೀಯರು ಹೃದಯದ ಸಮಸ್ಯೆಗಳಿಗೆ ಜನ್ಮತಃ ತೆರೆದುಕೊಂಡಿರುವುದರಿಂದ, ಆರೋಗ್ಯದ ಬಗ್ಗೆ ಹೆಚ್ಚಿನ ಮುತುವರ್ಜಿ ಬೇಕು. ಸಮಸ್ಯೆ ಇರುವುದು ದೇಹದಾರ್ಢ್ಯಕ್ಕೆ ಒತ್ತುನೀಡುವುದರಲ್ಲಿ ಅಲ್ಲ; ತಜ್ಞರ ಮೇಲ್ವಿಚಾರಣೆ ಇಲ್ಲದೆ ನಮ್ಮಿಷ್ಟಕ್ಕೆ ನಾವು ದೇಹವನ್ನು ದಂಡಿಸುವುದರಲ್ಲಿ. ಸ್ವಯಂಚಿಕಿತ್ಸೆಯಷ್ಟೇ ಸ್ವಯಂ ದೇಹದಂಡನೆಯೂ ಅಪಾಯಕಾರಿ. ದೇಹವನ್ನು ಹುರಿಗಟ್ಟಿಸುವ ನಿಟ್ಟಿನಲ್ಲಿ ಅಡ್ಡದಾರಿಗಳು ಕ್ಷೇಮಕರವಲ್ಲ. ಸಣ್ಣಗಾಗುವುದು ಹೇಗೆ, ದಪ್ಪಗಾಗುವುದು ಹೇಗೆ ಎಂದು ಸಾರುವ ಬಣ್ಣದ ಜಾಹೀರಾತುಗಳು ಹಾಗೂ ಪ್ರೊಟೀನ್ ಒಳಸುರಿಗಳು ಅಮಾಯಕರಿಂದ ಹಣದ ಸುಲಿಗೆ ಮಾಡುವುದಷ್ಟೇ ಅಲ್ಲ, ದೇಹದ ಆರೋಗ್ಯಕ್ಕೂ ಮಾರಕವಾಗಬಲ್ಲವು.



ಈಶ್ವರ್

ಪುನೀತ್ ಅವರ ಸಾವಿನಲ್ಲಿ ಯುವಜನಕ್ಕೊಂದು ಪಾಠವಿದೆ. ಬಹಿರಂಗದ ಚೆಲುವಿಗಿಂತಲೂ ಅಂತರಂಗದ ಸೌಂದರ್ಯ ಸಮಾಜಕ್ಕೆ ಅಂತಿಮವಾಗಿ ಮುಖ್ಯವಾಗುತ್ತದೆ ಎನ್ನುವ ಪಾಠವದು. ಪುನೀತ್ ಅವರಿಗಿಂತಲೂ ಪ್ರತಿಭಾವಂತರಾದ ಅನೇಕ ಕಲಾವಿದರು ಚಿತ್ರರಂಗದಲ್ಲಿ ಇರಬಹುದು. ಆದರೆ, ವ್ಯಕ್ತಿತ್ವದ ವರ್ಚಸ್ಸಿನ ದೃಷ್ಟಿಯಿಂದ ಪುನೀತ್ ಉಳಿದೆಲ್ಲರಿಗಿಂತಲೂ ಭಿನ್ನವಾಗಿ ಕಾಣಿಸುತ್ತಿದ್ದಾರೆ. ಆ ಕಾರಣದಿಂದಲೇ ಅವರ ಅಗಲಿಕೆ ಸಮಾಜಕ್ಕೆ ಆಘಾತದಂತೆ ಕಾಣಿಸಿದೆ. ಪುನೀತ್ ಸಾವನ್ನು ವೈಯಕ್ತಿಕ ದುಃಖವೆಂದು ಭಾವಿಸುತ್ತಿರುವ ಬಹುತೇಕರು, ಅವರ ವ್ಯಕ್ತಿತ್ವದ ಸೌಂದರ್ಯ ಹಾಗೂ ದೀನದುರ್ಬಲರ ಬಗ್ಗೆ ಅವರಿಗಿದ್ದ ಕಾಳಜಿಯ ಬಗ್ಗೆ ಮೆಚ್ಚುಗೆಯ ಮಾತುಗಳನ್ನಾಡುತ್ತಿದ್ದಾರೆ. ಅಂತಃಕರಣಕ್ಕಿಂತಲೂ ಬಾಹ್ಯ ಚಹರೆಗಳೇ ಜನರಿಗೆ ಹೆಚ್ಚು ಆಕರ್ಷಕವಾಗಿ ಕಾಣಿಸುತ್ತಿರುವ ದಿನಗಳಲ್ಲಿ, ವ್ಯಕ್ತಿತ್ವದ ಚೆಲುವಿನ ಬಗ್ಗೆ ಸಮಾಜ ಮೆಚ್ಚಿ ಮಾತನಾಡುತ್ತಿರುವುದೊಂದು ವಿಶಿಷ್ಟ ವಿದ್ಯಮಾನ. ಪುನೀತ್‌ರ ಕಣ್ಮರೆ ಎಳೆಯರಿಗೆ ಮತ್ತು ಯುವಜನರಿಗೆ ಭಾವುಕ ಸಂಗತಿಯಾಗಿಯಷ್ಟೆ ಉಳಿಯದೆ, ತಮ್ಮ ವ್ಯಕ್ತಿತ್ವವನ್ನು ಸುಂದರಗೊಳಿಸಲು ಪ್ರೇರಣೆಯಾಗಿ ಒದಗಿಬರಬೇಕು. ಹಾಗಾದಲ್ಲಿ, ಅದು ನಿಜ ಕಲಾವಿದನೊಬ್ಬನಿಗೆ ಸಮಾಜ ಸಲ್ಲಿಸಿದ ಗೌರವವಾಗುತ್ತದೆ.

**■ ರಘುನಾಥ ಚ.ಹ.**